Koyana Waters Issue

ಶ್ರೀ ಎಸ್.ವೈ. ಪಾಟೀಲ್ (ಸಿಂದ್ಗಿ) :—ಮೊನ್ನೆ ದಿವಸ ಸರ್ಕಾರದವರು ಹೇಳಿಕೆ ಕೊಡುತಾ ಕೊಯ್ನಾದಿಂದ ನಮಗೆ ನೀರು ಬಂದಿದೆ ಎಂದು ಹೇಳಿದರು. ಆದರೆ ಅಲ್ಲಿಯ ಜನರು ನೀರು ಬಂದಿಲ್ಲ ಎಂದು ಹೇಳುತ್ತಿದ್ದಾರೆ. 3ನೇ ತಾರೀಕಿನಿಂದ ಈ ಸಭೆ ಮುಂದಕ್ಕೆ ಹೋಗುವುದಿದೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಖಚಿತವಾದ ಉತ್ತರ ಕೊಡಬೇಕೇ ಹೊರತು ಹಾರಿಕೆ ಉತ್ತರ ಕೊಡುವುದು ಸರಿಯಲ್ಲ. ನೀರು ನಿಜವಾಗಿ ಬಂದಿದ್ದರೆ ನಮ್ಮನ್ನು ಅಲ್ಲಿಗೆ ಕರೆದು ಕೊಂಡು ಹೋಗಿ ತೋರಿಸಿಕೊಡಿ. ಇಲ್ಲದಿದ್ದರೆ ಈ ರೀತಿ ಸುಳ್ಳು ಹೇಳುವುದನ್ನು ಬಿಟ್ಟುಬಿಡಿ.

ಶ್ರೀ ಜೆ. ಎಲ್. ಕಬಾಡಿ (ಬಳ್ಳೊಳ್ಳಿ) :—ನಾನು ಇಂದೇ ಬಿಜಾಪುರದಿಂದ ಬಂದಿದ್ದೇನೆ ಕೃಷ್ಣಾ ನದಿಯಲ್ಲಿ ನೀರು ಬರುವುದಕ್ಕೆ ಎಲ್ಲ ಏರ್ಪಾಡು ಮಾಡಿದ್ದೇವೆಂದು ಮಾನ್ಯ ವ್ಯವಸಾಯ ಮಂತ್ರಿಗಳು ಹೇಳಿಕೆ ಕೊಟ್ಟಿದ್ದರಿಂದ ನಮಗೆಲ್ಲಾ ಅನುಕೂಲವಾಗುತ್ತದೆಂದು ಆನಂದ ಪಟ್ಟಿದ್ದೆವು. ಆದರೆ ನಾನು ಕೋಲಾರ ಮತ್ತು ಚಿಕ್ಕಪರಿಷಿನಿಗೆ ಹೋಗಿ ನೋಡಿದಾಗ ಅಲ್ಲಿ ಒಂದು ಹನಿ ನೀರು ಕೂಡ ಬಂದಿರಲಿಲ್ಲ. ಮೊನ್ನೆ ದಿವಸ ಏತಕ್ಕೆ ಆ ರೀತಿ ಉತ್ತರ ಕೊಟ್ಟರು ಎಂಬುದು ನನಗೆ ಅರ್ಥವಾಗಲಿಲ್ಲ ? ಎಲ್ಲ ವಿಧವಾದ ಪ್ರಯತ್ನಗಳನ್ನು ಮಾಡಿದ್ದೇವೆ ಇನ್ನು 2–3 ದಿವಸಗಳಲ್ಲಿ ನೀರು ಬರುತ್ತದೆಂದು ನಾಲ್ಕೈದು ದಿವಸಗಳ ಕೆಳಗೆ ಸರ್ಕಾರದವರು ಹೇಳಿಕೆ ಕೊಟ್ಟರೂ ಸಹ ಇಲ್ಲಿಯವರೆಗೆ ನೀರು ಬಂದಿಲ್ಲ. ಅಲ್ಲಿಯ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ಇದರ ಬಗ್ಗೆ ಕೇಳಿದಾಗ. ಮಹಾರಾಷ್ಟ್ರದವರು ನೀರು ಬಿಟ್ಟಿದ್ದಾರೆ, ಆದರೆ ನಮಗೆ ಇನ್ನೂ ಬಂದಿಲ್ಲ ಎಂದು ಹೇಳಿದರು. ಮತ್ತು ಅವರು ಬಿಟ್ಟ ನೀರನ್ನು ಮಹಾರಾಷ್ಟ್ರದವರೇ ಉಪಯೋಗಿಸಿಕೊಳ್ಳುತ್ತಿದ್ದಾರೆಂದು ಕೇಳಿದ್ದೇನೆ, ಅದು ನಿಜವೋ ಅಥವಾ ಇಲ್ಲವೋ ಎಂಬುದು ಗೊತ್ತಿಲ್ಲ ಎಂದು ಸಹ ಹೇಳಿದರು.

ಶ್ರೀ ಎಚ್.ಎಂ. ಚೆನ್ನಬಸಪ್ಪ:—ನಾವು ಹೇಳಿರತಕ್ಕದ್ದು ಖರೆ, ನೀವು ಹೇಳಿರತಕ್ಕದ್ದು ಖರೆ. ಅವರು ನೀರು ಬಿಟ್ಟಿರುವುದು ನಿಜ ; ಅದು ಬರುತ್ತಿದೆ. ಈಗ ಮಹಿಷಾಳದಿಂದ 25 ಮೈಲಿ ದೂರದವರೆಗೆ ಬಂದಿದೆ. ಆದ್ದರಿಂದ ಆತುರ ಪಡಬೇಕಾಗಿಲ್ಲ. ಅಲ್ಲಿಂದ ಬರುವುದಕ್ಕೆ ಸ್ವಲ್ಪ ಕಾಲ ತೆಗೆದುಕೊಳ್ಳುತ್ತದೆ. ಓಟ ಇರುವ ಕಡೆಗಳಲ್ಲಿ ನೀರು ಜಾಗ್ರತೆ ಬರುತ್ತದೆ.

ಶ್ರೀ ಡಿ. ದೇವರಾಜ್ ಅರಸ್ :—ಅದನ್ನು ಪೂರ್ತಿ ಓದಿಬಿಡಿ.

Statement by the Minister for Public Works and Electricity

Re. : Release of Koyana Waters

Sri H. M. CHANNABASAPPA (Minister for Public Works and Electricity).—As per the Agreement reached with the Maharashtra Government, a request was made for release of 6,000 cusecs of water a day from Koyana in three instalments of 2,000 cusecs a day over a period of 4 days in each fortnight of April and May with the arrangement that the water so far released be measured at Maisal Weir which